ಸೀಳಿ ಮನಿ ಅಂಗಳ ಮ್ಯಾಗ ಹೊಳೆಯುತ್ತಿತ್ತು. ನಡು ವಯಸ್ಸಿನ ಹೆಂಗಸರಿಬ್ಬರು ತುಂಬಿದ ಮೈಹೊತ್ತು ಬೀದ್ಯಾಗ ತಮ್ಮ ಮಾತಿನ ಧಾಟ್ಯಾಗ ನಕ್ಕಂತ ವೈಯಾರ ಮಾಡಿಕೆಂತ ತಮ್ತಮ್ಮ ಹಲ್ಲು ಹೊರ ಚೆಲ್ಲುತ್ತಿದ್ದರು. ಜೆಂಪು ಹೊಡಿತಿದ್ದ ಅವರ ತುಂಬಿದ ಎದಿಯನ್ನೊಮ್ಮೆ ರೆಪ್ಪಿ ಬಡಿಯದೆ ದಿಟ್ಟಿಸಿ ಅವರು ಮರಿಯಾಗತನಕ ನೋಡಿ ಪಾರಿ ಕಣ್ಣು ರೆಪ್ಪಿ ಬಡಿದಳು. ಬೆದಿಗೆ ಬಿದ್ದ ಬೀದಿ ನಾಯಿಗಳೆರಡು ಒಂದಾಗಿ ವಿರುದ್ಧ ದಿಕ್ಕಿನ್ಯಾಗ ತೀರದ ಸುಖದ ನರಳಾಟದಲ್ಲಿ ಕುಂಯ್ಗುಟ್ಟಿ ಜಗ್ಯಾಡಕತ್ತಿದ್ದವು. ಕೆಂಪ ನಾಯಿಯೊಂದು ಓಡಿ ಬಂದು ಮೂಸಿತು. ನೋಡಿ ಕಾಲು ಹೇರಕತ್ತಿದಾಗ ಕಡದಾಡಿದ ಭರದಲ್ಲಿ ಮೂರು ನಾಯಿಗಳು ಮೂರು ದಿಕ್ಕಾಗಿ ಓಡಿ ಮಾಯವಾದವು. ಪಾರಿ ಮಾರಿ ಮ್ಯಾಗಿನದು ಕಳೆ ಒಮ್ಮೆ ಕುಗ್ಗಿತ್ತು. ಅರೆಕ್ಷಣ ಆಕಾಶ-ಭೂಮ್ತಾಯಿ ಒಂದಾಗಲಿ ಎನ್ನುವಷ್ಟು ಆಕೆಯ ಜೀವ ಬಯಸಕತ್ತಿತ್ತು. ಹೊರ ಕಟ್ಟಿಮ್ಯಾಗ ಕುಂತಾಕಿ ಒಳಗ ಗಸ್ಸಕ್ಕನ್ ಹ್ವಾದಾಕಿನೇ ಕನ್ನಡಿ ಮುಂದೆ ತನ್ನ ನೀಳ ದೇಹವನ್ನು ಮ್ಯಾಲಿಂದ ಕೆಳಗಿನ ತನಕ ರೆಪ್ಪಿ ಬಡಿಯದೆ ನೋಡಿಕೇಸಿ ಮನಸ್ಸಾರೆ ಮರುಗಿದಳು. ತನ್ನ ಎಡುಕನ್ನೊಮ್ಮೆ ಬಗ್ಗಿಸಿ ಎಡಕ್ಕೊಮ್ಮೆ ಬಲಕೊಮ್ಮೆ ಕಣ್ಣು ಹಾಯಿಸಿಕೇಸಿ ತನ್ನ ಎದಿ ಮ್ಯಾಗ ಎರಡು ಕೈಯನ್ನು ಆಡಿಸಿಕೊಂಡು ಕಾಣದ ದೈವವನ್ನು ನೆನಸಿ ಕಣ್ಣು ಮುಚ್ಚಿದಾಗ ಹನಿಗಳು ಕಣ್ಣಿಂದ ಉದರಿ ಕಪಾಳ ಮಡ್ಡಿಯಿಂದ ಎದೆಗಿಳಿದವು. ಬೆಸತ್ತು ಒಮ್ಮೊಮ್ಮೆ 'ಈ ಹಾಳಾದ ಸಿವ್ನ ಗುಡಿಗೆ ಬೇಲಿಯಾದ್ರ ಬಡಿಬಾರದಾ?' ಎಂದು ತನ್ನಲ್ಲಿನ ಸಿಟ್ಟನ್ನು ಹಿಂಗ ಅಂದಾಡಿ ಮುರಿದುಕೊಂಡು ಕಣ್ಣೀರು ಸುರಿಸಾಕಕಿ. ಈಗೀಗ ಪಾರಿಯ ಸಂಕ್ಟದ ಸುದ್ದಿ ಓಣಿ ದಾಟಕೇಸಿ ಊರಿಗೆ ಹಬ್ಬಾಕ ಹತ್ತಿತು.

ಬಣ್ಣದಾಗ ಚೆಂದಾಗ ಚೆಲುವಿಯಾಗಿದ್ದ ಪಾರಿ ಮೈನರೆತು ಹತ್ತು ಕಳೇದು ಹನ್ನೊಂದ್ರಾಗ ಬಿದ್ದಿದ್ದು. ಮೆಲ್ಲುಕು ತನ್ನ ವಾರಿಗೇರು ಒಬ್ಬೊಬ್ಬರಾಗಿ ಕೈ ಹಿಡ್ಕೊಂಡು ಗಂಡನ ಮನೆ ಸೇರಕತ್ತಿದ್ರು. ಮುಂದೆ ಹುಟ್ಟಿ ಬೆಳದ ಪೋರಿಯರದೆಲ್ಲ ಕಂಕಣ ಬಲ ಕೂಡಿ ಬರ್ತಿದ್ದುದು ನೋಡಿ ಹಿರಿಯರು, ಮುದುಕಿಯರು ಹೇಳಿದಂಗ್ ಗುಡಿಗುಂಡಾರ, ಮಠ- ಮಸೀದಿ ಲೆಕ್ಕಯಿಲ್ಲದಂಗ್ ಸುತ್ತಿದ್ದರೂ, ಅದು ಯಾವುದು ಪೈದಾಗಲಿಲ್ಲ. ಸಾಹಸಗಳನ್ನೆಲ್ಲ ಮಾಡಿಕೇಸಿ ಅವುಕರಕಾಲಾಗ ಹೈರಾಣಾಗಿ ಬೇಸತ್ತಾಗ 'ಯಾಕಾದ್ರೂ ನನ್ನೀ ರೂಪದಾಗ ಹಾಕಿದ್ನೋ ಆ ಸಿವ್ನಿಗೆ ಮಣ್ಣಾಯಿಲಿ, ಅವ್ನ ಗೂಡಿಗೆ ಬಾರಿ ಮುಳ್ಳು ಬಡಿಲಿ' ಎಂದು ಪಾರಿ ಹಾರಾಟಕ್ಕ ಲಟಗಿ ಮುರಿತಿದ್ದು. 'ಏ ಯವ್ವಾ, ಆ ಸಿವ್ನು ಎಲ್ಲಾನು ಕೊಟ್ಟಾನಂತ ಅದು ಕೊಡಂಗಿಲ್ಲ ಅಂತಾನ ಏನು? ಕೊಟ್ಟೇ ಕೊಡ್ತಾನವ, ಬಂದೇ ಬರ್ತಾವ ನೋಡಕಂತಿ. ಇದ್ನ ದಿನ ಸವುಲೇ ಕುಡಿ' ಎಂದೇಳಿದವರ ಮಾತು ಲೆಕ್ಕಕ ತಗಂಡು ಕುಟ್ಟಿದ ತಪ್ಪಲ್ಲ ತವಡು ನಸಿಗಲೇ ಹಾಳು ಹೊಟ್ಟ್ಯಾಗ ಕುಡಿತ್ತಿದ್ದು. ಅಂಗೊಮ್ಮೆ ಹಿಂಗೊಮ್ಮೆ ತನ್ನಿಚ್ಛೆಗೆ ಬಂದಂತೆ ಕನ್ನಡಿ ಮುಂದೆ ನಿಂತುಕಂಡು ತನ್ನ ಮೈಯನ್ನು ಪದೇಪದೇ ನೋಡಿಕೊಂಡು ತಾಯಿ ಬೈಗಳಕ್ಕ ಗುರಿಯಾಗುತ್ತಿದ್ದಳು. ಊರಾಗ ದಾರಿ ಹಿಡದು ಪಾರಿ ಹೊಂಟದ್ರ, ತುಡುಗು ಗಂಡಸರೆಲ್ಲ ಸೇರಿಕೊಂಡು ತಮ್ಮ ತಮ್ಮ ಮಾತಿನ್ಯಾಗ ನೆವ್ನ

